## ಸೂಕ್ತಿಪ್ರಭ

ವಿವೇಕ, ವೈರಾಗ್ಯ ಮತ್ತು ಭಕ್ತಿ ಇವುಗಳೊಂದಿಗೆ ಪ್ರಪಂಚದಲ್ಲಿದ್ದರೆ ಯಾವ ಅಪಾಯವೂ ಇಲ್ಲ.

**

ಸತ್ಯದ ಪರಂಜ್ಯೋತಿಯಿಂದ ಯಾರು ಪರಿಶುದ್ಧಾತ್ಮರಾಗಿರುವರೋ ಅವರೇ ನಿಜವಾದ ಗುರುಗಳು.

**

ಆತ್ಮತೇಜಸ್ಸನ್ನು ಹೊರಪಡಿಸುವ ಅಹಂಕಾರ ಅಹಂಕಾರವಲ್ಲ, ಆತ್ಮನನ್ನು ಅವಹೇಳನ ಮಾಡಿಕೊಳ್ಳುವ ದೈನ್ಯತೆ ನಿಜವಾದ ದೈನ್ಯತೆಯಲ್ಲ.

**

ಯಾವುದು ಚಿತ್ತ ಮತ್ತು ಹೃದಯವನ್ನು ಶುದ್ಧಿ ಮಾಡುವುದೋ ಅದೇ ಜ್ಞಾನ. ಉಳಿದುದೆಲ್ಲ ಅಜ್ಞಾನ.

**

ನೀನು ದೇವರನ್ನು ನೋಡಬೇಕಾದರೆ ಹರಿನಾಮೋಚ್ಚಾರಣೆಯಲ್ಲಿ ಅಚಲವಾದ ಭಕ್ತಿಯನ್ನಿಡು ಮತ್ತು ನಿತ್ಯಾನಿತ್ಯ ವಸ್ತುಗಳ ವಿವೇಕವನ್ನು ಮಾಡು.

**

ಯಾರೂ ಅರಿಯದ ಸ್ಥಳದಲ್ಲಿಯೋ, ಕಾಡಿನ ನಿರ್ಜನ ಪ್ರದೇಶದಲ್ಲಿಯೋ, ಅಥವಾ ಮನಸ್ಸಿನ ಅಂತರಾಳದಲ್ಲಿಯೋ ದೇವರನ್ನು ಧ್ಯಾನಿಸಿ.

**

ಅಹಂಕಾರವಿರುವತನಕ ಆತ್ಮಜ್ಞಾನವಾಗಲೀ ಮುಕ್ತಿಯಾಗಲಿ ದೊರಕುವುದಿಲ್ಲ, ಜನನ ಮರಣಗಳಿಗೆ ಕೊನೆಯಿಲ್ಲ.

**

ಶ್ರೀರಾಮಕೃಷ್ಣ

# ಪ್ರಾರ್ಥನೆ

***ಸ್ವಾಮಿ ವಿರಜಾನಂದ ವಿರಚಿತ ಶ್ರೀರಾಮಕೃಷ್ಣ ಸ್ತೋತ್ರದಶಕದಿಂದ***

ಸರ್ವ-ಜೀವ-ಪಾಪ-ನಾಶ-ಕಾರಣಂ ಭವೇಶ್ವರಂ
ಸ್ವೀಕೃತಂ ಚ ಗರ್ಭವಾಸ-ದೇಹಪಾಶ-ಮೀದೃಶಮ್ ।
ಯಾಪಿತಂ ಸ್ವಲೀಲಯಾ ಚ ಯೇನ ದಿವ್ಯಜೀವನಂ
ತಂ ನಮಾಮಿ ದೇವ-ದೇವ-ರಾಮಕೃಷ್ಣ-ಮೀಶ್ವರಮ್ ॥

ಎಲ್ಲ ಜೀವರ ಪಾಪಗಳ ನಾಶಕ್ಕೆ ಕಾರಣರಾಗಿರುವ, ಜಗತ್ಪ್ರಭುವಾಗಿರುವ, ಇಂತಹ ಗರ್ಭವಾಸವನ್ನೂ ದೇಹಪಾಶವನ್ನೂ ಸ್ವಂತ ಇಚ್ಛೆಯಿಂದಲೇ ಸ್ವೀಕರಿಸಿರುವ, ತಮ್ಮ ದಿವ್ಯಜೀವನವನ್ನು ಲೀಲೆಯಿಂದಲೇ ನಡೆಸಿರುವ ದೇವಾಧಿದೇವ ಈಶ್ವರಸ್ವರೂಪಿಯಾಗಿರುವ ಶ್ರೀರಾಮಕೃಷ್ಣರನ್ನು ನಮಸ್ಕರಿಸುತ್ತೇನೆ.

ಸರ್ವ-ಧರ್ಮ-ಗಮ್ಯ-ಮೂಲ-ಸತ್ಯ-ತತ್ತ್ವ-ದೇಶಕಂ
ಸಿದ್ಧ-ಸರ್ವ-ಸಂಪ್ರದಾಯ-ಸಾಂಪ್ರದಾಯ-ವರ್ಜಿತಮ್ ।
ಸರ್ವ-ಶಾಸ್ತ್ರ-ಮರ್ಮ-ದರ್ಶಿ-ಸರ್ವವಿನ್ನಿರಕ್ಷರಂ
ತಂ ನಮಾಮಿ ದೇವ-ದೇವ-ರಾಮಕೃಷ್ಣ-ಮೀಶ್ವರಮ್ ॥

ಎಲ್ಲ ಧರ್ಮಗಳಿಂದಲೂ ಪಡೆಯಬಹುದಾದ ಮೂಲಸತ್ಯದ ಸ್ವರೂಪವನ್ನು (ಒಂದೇ ಎಂದು) ತೋರಿಸಿಕೊಟ್ಟವರೂ, ಎಲ್ಲ ಸಂಪ್ರದಾಯಗಳಲ್ಲಿಯೂ ಸಿದ್ಧಿಯನ್ನು ಹೊಂದಿದ್ದರೂ ಸಂಪ್ರದಾಯಗಳಿಗೆಲ್ಲ ಅತೀತರಾದವರೂ, ಎಲ್ಲ ಶಾಸ್ತ್ರಗಳ ಸಾರವನ್ನು ಕಂಡು, ಎಲ್ಲವನ್ನೂ ತಿಳಿದಿರುವವರೂ ದೇವಾಧಿದೇವ ಈಶ್ವರಸ್ವರೂಪಿಯಾಗಿರುವ ಶ್ರೀರಾಮಕೃಷ್ಣರನ್ನು ನಮಸ್ಕರಿಸುತ್ತೇನೆ.

ಧರ್ಮ-ಹಾನ-ಹಾರಕಂ-ತ್ವ-ಧರ್ಮ-ಕರ್ಮ-ವಾರಕಂ
ಲೋಕ-ಧರ್ಮ-ಚಾರಣಂ-ಚ-ಸರ್ವಧರ್ಮಕೋವಿದಮ್ ।
ತ್ಯಾಗಿ-ಗೇಹಿ-ಸೇವ್ಯ-ನಿತ್ಯ-ಪಾವನಾಂಘ್ರಿ ಪಂಕಜಂ
ತಂ ನಮಾಮಿ ದೇವ-ದೇವ-ರಾಮಕೃಷ್ಣ-ಮೀಶ್ವರಮ್ ॥

ಧರ್ಮಕ್ಕೆ ಒದಗುವ ಹಾನಿಯನ್ನು ಹೋಗಲಾಡಿಸುವವರೂ, ಅಧರ್ಮ ಕರ್ಮಗಳನ್ನು ನಿವಾರಿಸುವವರೂ, ಸರ್ವಧರ್ಮಗಳಲ್ಲಿ ನಿಪುಣರಾದರೂ ಲೋಕದ ಜನರಿಗಾಗಿ ಧರ್ಮವನ್ನಾಚರಿಸಿ ತೋರಿಸಿದವರೂ ಸಂನ್ಯಾಸಿಗಳಿಗೂ ಗೃಹಸ್ಥರಿಗೂ ಸಹ ಸೇವಿಸಲು ಯೋಗ್ಯವಾದ ಪವಿತ್ರ ಪಾದಪದ್ಮಗಳನ್ನುಳ್ಳವರೂ ದೇವಾಧಿದೇವ ಈಶ್ವರಸ್ವರೂಪಿಯಾಗಿರುವ ಶ್ರೀರಾಮಕೃಷ್ಣರನ್ನು ನಮಸ್ಕರಿಸುತ್ತೇನೆ.